# ಭಗವದ್ಗೀತೆ ಹಾಗೂ ಅಪರಾಧ ಮತ್ತು ಶಿಕ್ಷೆ

ಎಸ್.ವೆಂಕಟರಾಮ್

ವ್ಯಾಸ ರಚಿಸಿದನೆಂದು ನಂಬಲಾಗಿರುವ ಭಗವದ್ಗೀತೆ ಒಂದು ಪ್ರವಚನ. ದೋಸ್ತೋವಸ್ಕಿಯ ಅವರಾಧ ಮತ್ತು ಶಿಕ್ಷೆ ಒಂದು ಕಾದಂಬರಿ. ಒಂದು, ಎರಡು ಸಾವಿರದ ಐನೂರು ವರುಷದಷ್ಟು ಪ್ರಾಚೀನ ಭಾರತೀಯ ದಾರ್ಶನಿಕ ಗ್ರಂಥ. ಇನ್ನೊಂದು, ನೂರು ವರುಷದಷ್ಟು ಈಚೆಗಿನ ರಷ್ಯನ್ ಸಾಹಿತ್ಯ ಕೃತಿ. ಈ ಎರಡರ ಕಥಾಸಂದರ್ಭಗಳೂ ಸಂಪೂರ್ಣವಾಗಿ ಬೇರೆ ಬೇರೆ. ಆದರೆ ಈ ಎರಡೂ ಕೃತಿಗಳು ಶೋಧಿಸುವ ಮೂಲ ಸಾಮಗ್ರಿ ಒಂದು ಆಧ್ಯಾತ್ಮಿಕ ತರ್ಕ.

ಭಗವದ್ಗೀತೆ ಕುರುಕ್ಷೇತ್ರದಲ್ಲಿ ಕಿಂಕರ್ತವ್ಯಮೂಢನಾದ ಕ್ಷತ್ರಿಯನೊಬ್ಬನಿಗೆ ಆ ಯುದ್ಧದ ಸೂತ್ರಧಾರ ಮಾಡಿದ ಉಪದೇಶ. ಸಂತೆಯ ನಡುವೆ ನಿಂತು ಹೇಳಿದ ತತ್ವ. ಯುದ್ಧ ಸನ್ನದ್ಧರಾದ ಯೋಧರು, ಅವರು ಕೈಯಲ್ಲಿ ಹಿಡಿದ ಮಾರಕ ಶಸ್ತ್ರಾಸ್ತ್ರಗಳು, ಯೋಧರ ಶಂಖನಾದ, ಕೊಂಬು, ಡೋಲು, ಮದ್ದಲೆಗಳ ನಿನಾದ, ಕುದುರೆಗಳ ಹೇಷಾರವ, ಇಂಥ ಸನ್ನಿವೇಶದಲ್ಲಿ ಯುದ್ಧ ಆರಂಭವಾಗಲಿರುವ ಮುನ್ನ ಅರ್ಜುನ ಸಾರಥಿ ಕೃಷ್ಣನಿಗೆ ಹೀಗೆ ಕೇಳಿಕೊಳ್ಳುತ್ತಾನೆಃ

> ಧೃತರಾಷ್ಟ್ರನ ದುಷ್ಟ ಸಂತಾನದ ಆಣತಿಯಂತೆ ಯುದ್ಧ ಮಾಡಲು
> ಸನ್ನದ್ಧರಾಗಿ ನಿಂತಿರುವ, ನಾನು ಯಾರೊಡನೆ ಹೋರಾಡಬೇಕಾ

ದಿಃ ವೆಂಕಟರಾಮ್‌ರವರು ನನಗೆ ಈ ಲೇಖನ ಕೊಟ್ಟಾಗಃ ಇದರ ಬಗ್ಗೆ ಒಂದಷ್ಟು ಚರ್ಚೆಯಾಗಲಿ ಎಂಬ ಆಶಯವನ್ನು ಹೊಂದಿದ್ದರು. ಆದರೆ ಈಗ ಅವರು ನಮ್ಮನ್ನೆಲ್ಲ ತೊರೆದು ಹೋಗಿದ್ದಾರೆ. ಆದರೆ ಅವರನ್ನ ಅರಿತವರಿಗೆ ಅವರ ನೆನಪು ಎಷ್ಟು ಗಾಢವಾದದ್ದು ಅನಿಸುತ್ತೆ. ಭಗವದ್ಗೀತೆ ಅನ್ನೋ ಮಿಥ್ಗೂ ವೆಂಕಟರಾಂರವರ ಪ್ರೀತಿಯೆನ್ನುವ ಮಿಥ್‌ಗೂ ಎಷ್ಟು ಸಮೀಕರಣವಿದೆ ಅನ್ನಿಸುತ್ತೆ. ದಯವಿಟ್ಟು ಈ ಲೇಖನದ ಪ್ರತಿಕ್ರಿಯೆ ಕಳಿಸಿ.

ಸಂಃ

> ಗಿದೆಯೋ ಅಂಥ ನನ್ನ ಶತ್ರುಗಳನ್ನು ನಾನು ನೋಡಬೇಕು. ನನ್ನ ರಥವನ್ನು ಅಲ್ಲಿಗೆ ಒಯ್ದು ನಿಲ್ಲಿಸು.

ಕೃಷ್ಣ ಎರಡು ಪಾಳಯಗಳ ನಡುವೆ ರಥವನ್ನು ನಿಲ್ಲಿಸುತ್ತಾನೆ. ಅರ್ಜುನ ಅಲ್ಲಿ ಉಭಯ ಶಿಬಿರಗಳಲ್ಲಿಯೂ ಹಂಚಿಹೋಗಿ ಪರಸ್ಪರ ಕೊಲ್ಲಲು ಸಿದ್ಧರಾಗಿ ನಿಂತಿದ್ದ ಬಂಧು ಬಾಂದವರು, ಮಿತ್ರರು, ಗುರುಗಳನ್ನು ಪರಮ ವಿಷಾದದಿಂದ, ಕರುಣೆಯಿಂದ ನೋಡುತ್ತಾನೆ. ಇದು ಭಗವದ್ಗೀತೆಯ ಶ್ರಾವ್ಯ ಸಂದರ್ಭ.

ಚಿಕ್ಕಂದಿನಿಂದಲೂ ಯುದ್ಧದ ಸಂಸ್ಕಾರ ಪಡೆದಿದ್ದ ಕ್ಷತ್ರಿಯನಾದ ಅರ್ಜುನನಿಗೆ ಧರ್ಮ ಸಂದಿಗ್ಧ ಹುಟ್ಟುತ್ತದೆ. ಅಲ್ಲಿಂದ ಮುಂದೆ ಮಹಾಭಾರತದ ಯುದ್ಧದ ವರದಿಗಾರನಾದ ಸಂಜಯನ ಮುಖಾಂತರ ಪ್ರಸಿದ್ಧ ಕೃಷ್ಣಾರ್ಜುನ ಸಂವಾದ ಬಿಚ್ಚಿಕೊಳ್ಳುತ್ತದೆ. ಅರ್ಜುನ ತನ್ನ ಅಳಲನ್ನು ಹೀಗೆ ತೋಡಿಕೊಳ್ಳುತ್ತಾನೆಃ

> ನನ್ನ ಬಂಧು ಬಾಂಧವರನ್ನು ಇಲ್ಲಿ ಕಂಡಾಗ ನನ್ನ ಕೈಗಾಲು ಸೋಲುತ್ತವೆ. ಬಾಯಿ ಒಣಗುತ್ತದೆ. ಮೈ ನಡುಗುತ್ತದೆ. ಕೂದಲು ನಿಮಿರುತ್ತದೆ. ಚರ್ಮ ಉರಿಯುತ್ತದೆ. ಗಾಂಢೀವ ಕೈಯಿಂದ ಜಾರುತ್ತದೆ... ಹೀಗೆ ಬಂಧು ಬಾಂಧವರನ್ನು ಕೊಲ್ಲುವುದರಿಂದ ಏನನ್ನು ತಾನೇ ಆಶಿಸಬಹುದು? ಇದು ಸೋತರವನ್ನು ಅಧೋಗತಿಗಿಳಿಸಿ, ಗೆದ್ದವರನ್ನು ಶಾಪಗ್ರಸ್ತರನ್ನಾಗಿ ಮಾಡುತ್ತದೆ. . . . ನಾನು ಮಾಡ ಹೊರಟಿರುವುದು ಏನು? ಮಹತಾಪಕರವಾದ ಸ್ವಹನ ಹತ್ಯೆ. ನಾನಷ್ಟು ಸ್ವಾರ್ಥಿಯೇ? ನಾನು ಅವರನ್ನು ಕೊಲ್ಲುವುದಿಲ್ಲ, ಅವರೇ ನನ್ನನ್ನು ಕೊಲ್ಲಲಿ. ಅದೇ ಉತ್ತಮ. ಈ ಲೋಕದ ರಾಜ್ಯವಾಗಲೀ, ದೇವಲೋಕದ ಸಿಂಹಾಸನವಾಗಲೀ ಈ ವ್ಯಥೆಯನ್ನು ನಿವಾರಿಸಲಾರದು.

ಇಷ್ಟು ಹೇಳಿ ಹೃದಯದಲ್ಲಿ ವ್ಯಥೆ ತುಂಬಿ ಕಣ್ಣಿನಲ್ಲಿ ನೀರು ತುಂಬಿ ತನ್ನ ಬಿಲ್ಲು ಬಾಣಗಳನ್ನು ಕೆಳಗೆಸೆದು ರಥದ ಪೀಠದ ಮೇಲೆ ಅರ್ಜುನ ಕುಳಿತುಬಿಟ್ಟ. ಈ ಸನ್ನಿವೇಶದಲ್ಲಿ ಅರ್ಜುನ ಏನು ಮಾಡಬೇಕು? ಅಥವಾ ಇಂಥ ಯಾವುದೇ ಸನ್ನಿವೇಶದಲ್ಲಿ ಯಾರಾದರೂ ಏನು ಮಾಡಬೇಕು?

ಇಲ್ಲಿಂದ ಮುಂದೆ ಶ್ರೀಕೃಷ್ಣನ ವ್ಯಕ್ತಿತ್ವ ಪೂರ್ಣವಾಗಿ ಪರಿಸ್ಥಿತಿಯನ್ನೂ ಸಂವಾದವನ್ನೂ ತನ್ನ ಹತೋಟಿಗೆ ತೆಗೆದುಕೊಳ್ಳುತ್ತದೆ. ಅವನ ವಾಕ್ಪ್ರವಾಹ ವ್ಯಕ್ತಿತ್ವದ ಅಧಿಕಾರಯುತ ಶೈಲಿ, ದಾರ್ಶನಿಕ ಪಾಂಡಿತ್ಯದೆದುರಿಗೆ ಅರ್ಜುನನ ತರ್ಕ ಶಕ್ತಿ ಚಿಂತನ ಸಾಮರ್ಥ್ಯ ನಿಧಾನವಾಗಿ ಕರಗಿ ಹೋಗುತ್ತದೆ. ಅತ್ಯಂತ ಮಾನವೀಯ ಸಂದಿಗ್ಧಕ್ಕೆ ಖುದ್ದು ಭೂಮಿಗಿಳಿದು ಬಂದ ಭಗವಂತ ಅಧಿಕಾರವಾಣಿಯಿಂದ ಸಮಾಧಾನ ಸೂಚಿಸುತ್ತಾನೆ. ಅವನ ಸಮಾಧಾನದ ಧಾಟಿ:

> ನಿನಗೆ ಇಂಥ ಹೃದಯ ದೌರ್ಬಲ್ಯ ಸಲ್ಲದು. ನಾನು ಅಜರಾಮರ, ಇಲ್ಲ ಜೀವರಾಶಿಗಳ ಪ್ರಭು. ಧರ್ಮಗ್ಲಾನಿಯಾದಾಗಲೆಲ್ಲ ನಾನು ಬಂದು ದುಷ್ಟ ಶಿಕ್ಷಣ, ಶಿಷ್ಟ ರಕ್ಷಣೆ ಮಾಡುತ್ತೇನೆ. ನನ್ನ ಪ್ರಕೃತಿಯ ಮೂಲಕವೇ ನಾನು ಜಗತ್ತಿನ ಸೃಷ್ಟಿ, ಪ್ರಳಯಗಳ ಕರ್ತ. ನನ್ನ ರೂಪ ಸ್ವಭಾವ ಅರಿತವನು ಜೀವನ್ಮುಕ್ತ. ನನ್ನನ್ನು ಆರಾಧಿಸುವವನ ಇಷ್ಟಾರ್ಥಗಳನ್ನು ನಾನು ಪೂರೈಸುತ್ತೇನೆ. ಚಾತುರ್ವರ್ಣ್ಯದ ಕರ್ತನಾದ ನಾನು ಎಲ್ಲ ಕತ್ತಲನ್ನೂ ನಿವಾರಿಸುವ ಜ್ಯೋತಿಯಂತಹ ಅರಿವು. ಈ ಜನರೆಲ್ಲ ನನ್ನಿಂದಲೇ ಹತರಾಗಿದ್ದಾರೆ. ನೀನು ನಿಮಿತ್ತ ಮಾತ್ರ. ಕ್ಷತ್ರಿಯನಾದ ನಿನಗೆ ಈ ಯುದ್ಧ ಧರ್ಮಸಮ್ಮತ.

ಮನುಷ್ಯನ ಚಿಂತನೆ ಸಾರಾಸಾರ ವಿಚಾರ, ನಿರ್ಧಾರಕ್ಕೆ ಇಲ್ಲಿ ಏನೇನೂ ಮಹತ್ವವಿಲ್ಲ, ಅವನು ನಿಮಿತ್ತ ಮಾತ್ರ. ಪ್ರವಚನದ ಎಲ್ಲ ತಿರುವು ಮುರುವುಗಳ ಮುಖ್ಯ ಧಾರೆ, ನಾನು ಎಂಬ ಈ ಧ್ವನಿ, ಆಧುನಿಕ ಕಾಲದಲ್ಲಿ ಈ ಧಾಟಿಯಲ್ಲಿ ಯಾರಾದರೂ ಮಾತನಾಡಿದರೆ ಆತನಿಗೆ ಮ್ಯಾಗಲೋಮ್ಯಾನಿಯ ಇದೆ-ಎನ್ನುತ್ತಾರೆ ಕಡೆಗೆ ಈ ರಭಸದಿಂದ ಬಚಾವಾಗಿ ಏನಾದರೂ ಕೋಮಲವಾದ ಹೂವಿನಂತೆಯೂ, ಮೊಳಕೆಯಂತೆಯೋ ಕಿಂಚಿತ್ತಾದರೂ ಮಾನವ ಸಹಜವಾದ ವಿಚಾರಶಕ್ತಿ ಉಳಿದಿದ್ದರೆ ಅದನ್ನು ನಿರ್ನಾಮಗೊಳಿಸಿದ್ದು 'ವಿಶ್ವರೂಪ' ದರ್ಶನದ ದಳ್ಳುರಿ.

ಕೋಟಿ ಸೂರ್ಯ ಸಮಪ್ರಭವಾದ ಅಂಸಖ್ಯ ಮುಖಗಳ ಅಂಗಾಂಗಗಳ ಸಹಿತವಾದ ಆಭರಣ ಖಚಿತವಾದ ವಿಶ್ವರೂಪವನ್ನು ಅರ್ಜುನ ಕಂಡ. ಅದನ್ನು ಕಾಣಲು ದಿವ್ಯದೃಷ್ಟಿ ಬೇಕಾಯಿತು. ಅದನ್ನು ಶ್ರೀಕೃಷ್ಣ ಅರ್ಜುನನಿಗೆ ನೀಡಿದ.

ಅಲ್ಲಿಗೆ ಮಾನವ ದೃಷ್ಟಿ, ಮಾನವ ಸಂವಾದ ಅಂತ್ಯ. ವ್ಯಕ್ತಿಯ ವಿಚಾರ ಶಕ್ತಿಗೆ ಇದು ಕಡೆಯ ಪ್ರಹಾರ. ತಾರ್ಕಿಕವಾಗಿ ಮಾತು ಪ್ರಾರಂಭಿಸಿದ ಕೃಷ್ಣ ಇಲ್ಲಿ ಸರ್ವಶಕ್ತನಾಗಿ ಮಾತು ಮುಗಿಸುತ್ತಾನೆ. ಅರ್ಜುನ ಹೀಗೆನ್ನುತ್ತಾನೆ:

ಅಜಾಗೃತನಾಗಿ ನಿನ್ನನ್ನು ಕೃಷ್ಣ, ಸಂಗಾತಿ ಎಂದು ಕರೆದ. ಅಮರನಾದ ದೇವನನ್ನು ಮಿತ್ರ, ನರನೆಂದು ಬಗೆದೆ. ಕ್ಷಮಿಸು, ಪ್ರಭು. ನಿನ್ನ ದಯೆಯಿಂದ ನನ್ನ ಭ್ರಾಂತಿ ನಿರ್ಮೂಲವಾಯಿತು. ನನ್ನ ಮನಸ್ಸು ನಿರ್ಧಾರವಾಗಿದೆ. ಅದರ ಅನುಮಾನಗಳು ತೀರಿವೆ, ನಿನ್ನ ಆಜ್ಞೆ ನಾನು ಪಾಲಿಸುತ್ತೇನೆ.

ಧರ್ಮಸಂದಿಗ್ಧದಿಂದ ವಿಷಣ್ಣನಾಗಿದ್ದ ಅರ್ಜುನ ಈಗ ಸ್ಪಷ್ಟ ಮನಸ್ಸಿನಿಂದ ಕ್ರಿಯೆಗೆ ತೊಡಗುತ್ತಾನೆ. ಅವನ ವಿಷಾದ ಹಾಗೂ ಕರುಣೆ ಕರಗಿಹೋಗಿದೆ. ಒಂದು ಮಹದೋದ್ದೇಶಕ್ಕಾಗಿ ಅವನಿಗೆ ಕೊಲೆ ಮಾಡುವ ಹಕ್ಕು ಇದೆ ಇಂಬ ನಂಬಿಕೆ ಬಂದಿದೆ ಅದುದರಿಂದ ಈ ಕ್ರಿಯೆ ಪ್ರಜ್ಞಾಪೂರ್ವಕನಾದ, ಪೂರ್ವ ನಿಯೋಜಿತವಾದ ಯುದ್ಧವೆಂಬ ಹೆಸರಿನ ಸಾಮೂಹಿಕ ಕೊಲೆ. ಇದರ ಉದ್ದೇಶ ರಾಜ್ಯ ಸಂಪತ್ತು, ಬಂಧು ಬಾಂಧವರ ಕೊಲೆ ಸಹಿತ ಯುದ್ಧದ ಅನಂತ ಅಪರಾಧಗಳೂ ನೈತಿವಾಗಿ ಸಿಂಧು, ಸಮರ್ಥನೀಯ. ಹಾಗೆಂದು ಎಲ್ಲ ತಿಳಿದವನಾದ ಎಲ್ಲಕ್ಕೂ ಕಾರಣ ಕರ್ತನಾದ ಅತಿಮಾನವನಾದ ಕೃಷ್ಣ ಹೇಳುತ್ತಾನೆ. ಅರ್ಜುನ ಕೃಷ್ಣನ ಉದ್ದೇಶಗಳ ಸಾಧನ, ನಿಮಿತ್ತ ಮಾತ್ರ. ಅರ್ಜುನ ಈ ಹೊಸ ದೃಷ್ಟಿಯನ್ನು ಮನಸಾರೆ ಒಪ್ಪಿದ್ದಾನೆ. ಉದ್ದೇಶ ಶುದ್ಧವಾದುದಾದರೆ, ಕಳಬಹುದು, ಕೊಲಬಹುದು, ಹುಸಿಯ ನುಡಿಯಲುಬಹುದು ತನ್ನ ಬಣ್ಣಿಸಬಹುದು, ತುಂಬಾ ಪರಿಚಿತ ಸಿದ್ಧಾಂತ.

ಮೂಲತಃ ಇದಕ್ಕೆ ತದ್ವಿರುದ್ಧವಾದ ಘಟನಾಚಕ್ರ ಹಾಗೂ ತರ್ಕಚಕ್ರದೊಸ್ತೋವಸ್ಕಿಯ 'ಅಪರಾಧ ಮತ್ತು ಶಿಕ್ಷೆ' ಯದು. ಅದರ ಕಥಾ ನಾಯಕ ರಾಸ್ಕೋಲ್ನಿ ಕೋವ್ ಸಾಮಂತ ವರ್ಗಮೂಲದ ಆದರೆ ಇಂದು ಅಹನ್ಯಹನಿ ಕಾಲಕ್ಷೇಪ ಮಾಡುತ್ತಿರುವ ನಿರ್ಗತಿಕ ವಿದ್ಯಾರ್ಥಿ. ಮದುವೆಯಾಗಲು ಪ್ರಾಪ್ತ ವಯಸ್ಕಳಾದ ಆದರೆ ಬಡತನದ ಕಾರಣದಿಂದ ಅನುರೂಪನಾದ

ವರನನ್ನು ಪಡೆಯಲಾರದೆ ರಾಸ್ಕೋಲ್ನಿಕೋಲವ್‌ನ ಅಭ್ಯುದಯದ ಸಲುವಾಗಿ ಅಪರವಯಸ್ಸಿನ ಉದ್ಧಟ ಶ್ರೀಮಂತನೊಬ್ಬನನ್ನು ಮದುವೆಯಾಗಲೊಪ್ಪಿರುವ ಅವನ ಸೋದರಿ. ಅವನಿಗಾಗಿ ಏನು ತ್ಯಾಗ ಮಾಡಲೂ ಸಿದ್ಧರಿರುವ ಆದರೆ ಅಸಹಾಯಕಳಾದ ವಾತ್ಸಲ್ಯಮಯಿ ತಾಯಿ ಅವನ ಆಪ್ತರು:

ರಾಸ್ಕೋಲ್ನಿಕೋವನ ಪ್ರಖರ ಆದರ್ಶಶೀಲ ಬುದ್ಧಿ ಒಂದು ಸಿದ್ಧಾಂತವನ್ನು ಕುರಿತು ಚಿಂತಿಸುತ್ತಿರುತ್ತದೆ. ಅವನು ಇದರ ಬಗ್ಗೆ ಒಂದು ಲೇಖನವನ್ನು ಬರೆದಿರುತ್ತಾನೆ ಕೂಡ.

> "ಜಗತ್ತಿನಲ್ಲಿ ಎರಡು ವರ್ಗದ ಜನ: ನಿಯಮಾತೀತರಾದ ಅತಿ ಮಾನವರು. ನಿಯಮ ಪಾಲಕರಾದ ಮಾನವರು. ಮಹಾಪುರುಷರು ಮಹತೋದ್ದೇಶಕ್ಕಾಗಿ ಏನಾದರೂ ಮಾಡಬಹುದು, ಕಳಬಹುದು, ಕೊಲಬಹುದು. ಅದು ಅವರು ಜಗತ್ತನ್ನು ಮುನ್ನಡೆಸುವ ದಾರಿ"

ಅಕಸ್ಮಾತ್ತಾಗಿ ಈ ಸಿದ್ಧಾಂತದ ಒಂದು ವ್ಯವಹಾರ್ಯ ಸಲಹೆ ಒಬ್ಬ ವಿದ್ಯಾರ್ಥಿ ಬೇರೆ ಯಾರೊಡನೆಯೋ ಮಾಡುತ್ತಿದ್ದ ಒಣ ಚರ್ಚೆಯ ಮಧ್ಯದಲ್ಲಿ ಅವನ ಕಿವಿಯ ಮೇಲೆ ಬಿದ್ದಿರುತ್ತದೆ:

> "ಗಿರವಿಯ ವ್ಯಾಪಾರ ನಡೆಸಿ ಸುಲಿಗೆ ಮಾಡುತ್ತಿರುವ ಒಬ್ಬ ದುಷ್ಟ ಮುದುಕಿಯನ್ನು ಕೊಲ್ಲು. ಅವಳ ಹಣ ತೆಗೆದುಕೋ. ಅದರ ನೆರವಿನಿಂದ ಮಾನವತೆಯ ಸೇವೆ. ಎಲ್ಲರ ಕಲ್ಯಾಣ ಸಾಧಿಸು. ಸಾವಿರಾರು ಸತ್ಕಾರ್ಯಗಳಿಂದ ಒಂದು ಅಪರಾಧ ತೊಡೆದು ಹೋಗುವುದಿಲ್ಲವೇ? ಒಂದು ಸಾವಿನಿಂದ ಸಾವಿರಾರು ಬದುಕುಗಳು ಭ್ರಷ್ಟತೆಯಿಂದ, ಅವನತಿಯಿಂದ ಉಳಿಯುವವು. ಒಂದು ಸಾವು ನೂರು ಜನರ ಬದುಕಿಗೆ ಸಮ. ಗಣಿತದಷ್ಟೇ ಸರಳ. ಜಗತ್ತಿನ ಜೀವರಾಶಿಯ ತಕ್ಕಡಿಯಲ್ಲಿ ಆ ಒಂದು ರೋಗಗ್ರಸ್ತ ಮೂರ್ಖ ದುಷ್ಟಸ್ವಭಾವದ ಮುದುಕಿಯ ಜೀವನದ ಬೆಲೆ ಏನು?"